# ಮತ್ತೊಂದ್ಸಲ ಧೂಮ್!

‘ಧೂಮ್’ ಸಿನಿಮಾ ಬಗ್ಗೆ ಗೊತ್ತಿಲ್ಲದವರು ಯಾರಿದ್ದಾರೆ? ಹಿಂದಿಯ ಈ ಸಿನಿಮಾ ಎಬ್ಬಿಸಿದ ಹವಾ ಕಮ್ಮಿಯೇನಲ್ಲ. ಇದೀಗ ಕನ್ನಡದಲ್ಲಿಯೂ ಧೂಮ್ ಸದ್ದು ಮಾಡಲು ಹೊರಟಿದೆ. ಹಾ, ಸ್ವಲ್ಪ ತಡೆಯಿರಿ. ಇದು ಆ ಧೂಮ್ ಅಲ್ಲ, ಆದರೆ ಅದೇ ಮಾದರಿಯ ಥ್ರಿಲ್ಲರ್ ಸಿನಿಮಾ. ಇದಕ್ಕೆ ರಾಜೇಶ್ ವರ್ಮ ಎಂಬ ಯುವ ನಿರ್ದೇಶಕ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದ ಹೆಸರು ‘ಧೂಮ್ ಅಗೇನ್’!

ಇಷ್ಟಕ್ಕೇ ಈ ಚಿತ್ರದ ವಿಶೇಷ ಕೊನೆಗೊಳ್ಳುವುದಿಲ್ಲ. ಕ್ರಿಕೆಟ್ ಅಂಗಳದಲ್ಲಿ ರೊಚ್ಚಿಗೇಳುವುದರ ಮೂಲಕವೇ ಜನಪ್ರಿಯರಾಗಿದ್ದ ಶ್ರೀಶಾಂತ್ ಈ ಚಿತ್ರದ ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ‘ಧೂಮ್’ನಲ್ಲಿ ಅಭಿಷೇಕ್ ಬಚ್ಚನ್ ನಿರ್ವಹಿಸಿದಂಥ ಪಾತ್ರವನ್ನು ಅವರು ನಿರ್ವಹಿಸುತ್ತಿದ್ದಾರಂತೆ. ಕನ್ನಡವೊಂದೇ ಅಲ್ಲ, ತೆಲುಗು, ತಮಿಳು, ಮಲಯಾಳಂ ಜೊತೆಗೆ ಹಿಂದಿಯಲ್ಲಿಯೂ ‘ಧೂಮ್’ ದಾಮ್ ಎನಿಸಲು ಚಿತ್ರತಂಡ ನಿರ್ಧರಿಸಿದೆ. ಹಿಂದಿಯಲ್ಲಿ ಈಗಾಗಲೇ ಈ ಹೆಸರಿನ ಚಿತ್ರ ಬಂದಿರುವುದರಿಂದ ‘ಧೂಮ್ ಮಚಾಲೆ..’ ಎಂಬ ಟ್ಯಾಗ್ ಲೈನ್ ಇಟ್ಟು, ಹಿಂದಿನ ಧೂಮ್‌ಗೆ ಟ್ಯಾಗ್ ಮಾಡುವ ತಂತ್ರವನ್ನೂ ನಿರ್ದೇಶಕರು ರೂಪಿಸಿಕೊಂಡಿದ್ದಾರೆ. ಶ್ರೀಶಾಂತ್ ಅವರಿಗೆ ಜೋಡಿಯಾಗಿ ಸೊಂಟ ಬಳುಕಿಸಿ ಥ್ರಿಲ್ ಹೆಚ್ಚಿಸಲು ಜನಿರಾ ಎಂಬ ಮಾಡೆಲ್ ಅನ್ನು ಕರೆತರುತ್ತಿದ್ದಾರೆ.

ನಾಮಬಲವನ್ನೇ ನೆಚ್ಚಿಕೊಂಡು ಸಿನಿಮಾ ಮಾಡುವುದು ಇದೇ ಮೊದಲೇನಲ್ಲ. ಆದರೆ ಅದರಲ್ಲಿ ಯಶಸ್ವಿಯಾಗಿದ್ದು ಮಾತ್ರ ತುಂಬ ಕಡಿಮೆ. ಹಾಗಾಗಿ ಈ ‘ಧೂಮ್ ಅಗೇನ್’ ದೂಳೆಬ್ಬಿಸುತ್ತದೆಯೋ, ಪಂಕ್ಚರ್ ಆಗುತ್ತದೆಯೋ ಕಾದು ನೋಡಬೇಕಷ್ಟೆ.

ಚಿತ್ರ: ಕೆ.ಎನ್. ನಾಗೇಶ್‌ಕುಮಾರ್





# ಕಿರಿಕ್ ರಶ್ಮಿಕಾ

‘ಕಿರಿಕ್ ಪಾರ್ಟಿ’ ಸಿನಿಮಾದ ಹೆಸರಲ್ಲಿಯೇ ಏನೋ ದೋಷ ಇರುವಂತಿದೆ. ಈ ಚಿತ್ರದಿಂದ ನಟನೆ ಆರಂಭಿಸಿದ ಇಬ್ಬರು ಹುಡುಗಿಯರ ಹೆಸರೂ ಪದೇಪದೆ ‘ಕಿರಿಕ್’ ಕಾರಣಗಳಿಂದ ಚರ್ಚೆಗೊಳಗಾಗುತ್ತಿವೆ. ಮೊದಲು ಸಂಯುಕ್ತಾ ಹೆಗಡೆ, ‘ಕಾಲೇಜ್ ಕುಮಾರ’ ಸಿನಿಮಾದ ನಿರ್ಮಾಪಕರ ಜೊತೆ ನಡೆಸಿದ ಜಟಾಪಟಿ ಸಾಕಷ್ಟು ಸುದ್ದಿಯಾಯಿತು. ಅಲ್ಲಿಂದ ಮುಂದೆ ಕನ್ನಡ ಚಿತ್ರರಂಗದಲ್ಲಿ ಮತ್ತೊಂದು ಚಿತ್ರದಲ್ಲಿ ಅವರ ಹೆಸರು ಕೇಳಿಬಂದಿಲ್ಲ. ಇತ್ತ ರಶ್ಮಿಕಾ ಮಂದಣ್ಣ ಅವರ ಅದೃಷ್ಟ ಖುಲಾಯಿಸಿ, ಕನ್ನಡದಿಂದ ತೆಲುಗಿಗೆ ಹಾರಿ, ದಕ್ಷಿಣ ಭಾರತದ ಬಹುಬೇಡಿಕೆಯಾಗಿ ಗುರ್ತಿಸಿಕೊಂಡರು. ಆದರೆ ಅವರಿಗೆ ಗ್ರಹಚಾರ ನೆಟ್ಟಗಿದ್ದಂತಿಲ್ಲ. ರಕ್ಷಿತ್ ಶೆಟ್ಟಿ ಜೊತೆ ಎಂಗೇಜ್‌ಮೆಂಟ್ ಮತ್ತು ಬ್ರೇಕ್‌ಅಪ್ ಕಾರಣಕ್ಕೆ ಸಖತ್ ಸುದ್ದಿಯಾಗಿದ್ದ ಬೆಡಗಿ, ಈಗ ಮತ್ತೊಮ್ಮೆ ಟೀಕೆಯ ಕೇಂದ್ರದಲ್ಲಿ ಕೂತಿದ್ದಾರೆ.

ಈ ಸಲ ಟೀಕೆ ಎದುರಿಸುತ್ತಿರುವುದು ವೈಯಕ್ತಿಕ ಕಾರಣಗಳಿಗಲ್ಲ; ಭಾಷೆಯ ಕಾರಣಕ್ಕೆ. ತಮಿಳು ವಾಹಿನಿಯೊಂದರ ಸಂದರ್ಶನದಲ್ಲಿ ನಿರೂಪಕನ ಪ್ರಶ್ನೆಗೆ ಅವರು, ‘ನನಗೆ ಕನ್ನಡದಲ್ಲಿ ಡಬ್ ಮಾಡುವುದೂ ಕಷ್ಟ’ ಎಂಬರ್ಥದ ಪ್ರತಿಕ್ರಿಯೆ ನೀಡಿರುವುದು ಕೆಲವು ಕನ್ನಡಭಾಷಾಪ್ರೇಮಿಗಳನ್ನು ರೊಚ್ಚಿಗೆಬ್ಬಿಸಿದೆ. ‘ನನಗೆ ಯಾವ ಭಾಷೆಯೂ ಸರಿಯಾಗಿ ಬರುವುದಿಲ್ಲ’ ಎಂದು ಅವರು ಹೇಳಿದ್ದಾರೆ. ‘ಯಾವ ಭಾಷೆ ಬರದಿದ್ದರೂ ಪರವಾಗಿಲ್ಲ. ಕನ್ನಡ ಅವರನ್ನು ಗುರ್ತಿಸಿದ, ಬೆಳೆಸಿದ ಭಾಷೆ. ಅದೂ ಬರುವುದಿಲ್ಲ ಎಂದಾದರೆ ಯಾಕೆ ನಟಿಸಬೇಕು‘ ಎಂಬುದು ಟೀಕಾಕಾರರ ಪ್ರಶ್ನೆ.

ಸಾಮಾಜಿಕ ಜಾಲತಾಣಗಳಲ್ಲಿ ಈ ಕುರಿತು ಸಾಕಷ್ಟು ಟೀಕೆ ವ್ಯಕ್ತವಾಗಿ, ಕನ್ನಡಪರ ಹೋರಾಟಗಾರರು ಎಚ್ಚರಿಕೆ ನೀಡುತ್ತಿದ್ದರೂ ರಶ್ಮಿಕಾ ಈ ಬಗ್ಗೆ ತುಟಿ ಪಿಟಿಕ್ ಅಂದಿಲ್ಲ. ಬಹುಶಃ ಕನ್ನಡದಲ್ಲಿ ಪ್ರತಿಕ್ರಿಯೆ ನೀಡುವುದೂ ಕಷ್ಟ ಎಂಬ ಕಾರಣಕ್ಕೆ ಸುಮ್ಮನಾಗಿದ್ದಾರೋ ಏನೋ.